Reg No B G 155 29 — 3 —72

55 th Year of Publication ‘Satyavadi’ Daily, Mysore 4

In the Sta e – The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಸಂದರ್ಭೀಕರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ ಎಸ್. ಕೃಷ್ಣರಾವ್ [2 ಪೈಸೆ

ಭಾರತೀಯ ಒತ್ತಾಯಕ್ಕೆ ಆಫ್ರಿಕ ಒಪ್ಪಿಗೆ

ವಿರೋಧಪ್ರದರ್ಶನ

ಬೆಲ್ಫಾಸ್ಟ್ – ಬ್ರಿಟಿಷರು ಶಾಂತಿಯ ಪಡೆಯಿತ ವಹಿಸಿಕೊಂಡಿದ್ದನ್ನು ವಿರೋಧಿಸಿ ಕಾರ್ಮಿಕರು 48 ಗಂಟೆಗಳ ಮುಷ್ಕರ ಕೈಗೊಂಡುದರಿಂದ ಉತ್ತರ ಐರ್ಲೆಂಡಿನಲ್ಲಿ ಜೀವಿತ ಸ್ತಂಭಗೊಂಡಿತ್ತು.

○

ಹತ್ಯೆ ಸಾಧಿಸಲಾಯಿತು

ಕೇಪ್‌ಟೌನ್– ದಕ್ಷಿಣ ಆಫ್ರಿಕಾದಲ್ಲಿನ 650000 ಭಾರತೀಯರ ಒತ್ತಾಯಕ್ಕೆ ಜಗ್ಗಿ, ಸರಕಾರ ಸದಸ್ಯರನ್ನು ನಾಮಕರಣ ಮಾಡುವ ಸಂಸ್ಥೆಯಾದ ದಕ್ಷಿಣ ಆಫ್ರಿಕಾ ಭಾರತೀಯ ಸಮಿತಿಗೆ ಕೆಲವು ಚುನಾಯಿತ ಸದಸ್ಯರಿರುವುದಕ್ಕೆ ಸರಕಾರ ಒಪ್ಪಿತು.

●

ವಿವಾಹವಿಚ್ಛೇದನೆ

ರೋಮನ್ ಕ್ಯಾಥಲಿಕ್ ಬಹುಸಂಖ್ಯಾತರಿರುವ ಇಟಲಿಯು ವಿವಾಹ ವಿಚ್ಛೇದನೆ ಜಾರಿಗೆ ತರುವ 27 ನೇ ಐರೋಪ್ಯದೇಶವಾಗಿದೆ – ಸ್ಪೇನ್, ಐರ್ಲೆಂಡ್, ಮಾಲ್ಟಾ, ಮತ್ತು ಆಡಡೋರ್‌ನಲ್ಲಿ ವಿವಾಹ ವಿಚ್ಛೇದನೆ ಇಲ್ಲ

★

ವಸತಿಗಾಗಿ

ನವದೆಹಲಿ– ವಸತಿ ನಿರ್ಮಾಣ ಕಾರ್ಯಕ್ಕೆ ರೂ 35 ಕೋಟಿ ಸಾಲ ಮಂಜೂರು ಮಾಡಲಾಗಿದೆ.

ಭುಟ್ಟೋ ಸಲಹೆ

ನವದೆಹಲಿ— ಕಾಶ್ಮೀರದಲ್ಲಿ ಯುದ್ಧ ವಿರಾಮ ರೇಖೆಯನ್ನು “ ಶಾಂತಿ ರೇಖೆ ’ ಯಾಗಿ ಮಾಡಿ, ಎರಡು ದೇಶಗಳವರೂ ಆನಿರ್ಬಂಧನವಾಗಿ ಓಡಾಡುವಂತಾಗಲೆಂದು ಭುಟ್ಟೋ ಸಲಹೆ ಮಾಡಿರುವರು

★

ರೈಲಿನಲ್ಲಿ 2700 ಪ್ರಯಾಣೀಕರು

ಪುನಾಬಾಸಿ ಒಂದು ಕಮ್ಯೂಟರ್ ರೈಲು ಇನ್ನೊಂದಕ್ಕೆ ಡಿಕ್ಕಿ ಹೊಡೆದು 570 ಮಂದಿ ಗಾಯಗೊಂಡರು – ಎರಡು ರೈಲುಗಳಲ್ಲೂ ತಲಾ 2700 ಪ್ರಯಾಣೀಕರಿದ್ದರು.

●

ಯುದ್ಧ ತಕ್ಸೀರುದಾರರ ವಿಚಾರಣೆ

ಢಾಕಾ— ಬಂಗ್ಲಾ ದೇಶದಲ್ಲಿ ನರಹತ್ಯೆಕ್ಕೆ ಪಾಕಿಸ್ತಾನಿ ಸಶಸ್ತ್ರ ಪಡೆಗಳೊಡನೆ ಸೇರಿದ ಯುದ್ಧ ಅಪರಾಧಿಗಳ ಬಗ್ಗೆ ಬೇಗ ಮತ್ತು ನ್ಯಾಯವಾದ ವಿಚಾರಣೆಗಾಗಿ 73 ನ್ಯಾಯಾಂಗ ಮಂಡಲಿಗಳನ್ನು ನೇಮಿಸುವುದಾಗಿ ಪ್ರಕಟಿಸಿದೆ.

○

ಹುಲಿ, ಚಿರತೆ ಚರ್ಮಗಳ ಆಮದಿಲ್ಲ

ಲಂಡನ್ – ಹುಲಿ, ಚಿರತೆಗಳ ಆಮದನ್ನು ಬ್ರಿಟಿಷ್ ಸರಕಾರ ಪ್ರತಿಬಂಧಿಸಿದೆ – ಈ ಪ್ರಾಣಿಗಳ ಜೀವಿತಕ್ಕೆ ಅನಾನುಕೂಲ ತಪ್ಪಲೆಂದು ಹೀಗೆ ಮಾಡಿದೆ.

★

ತೆರಿಗೆ ಬಗ್ಗೆ ಟೀಕೆ

ನವದೆಹಲಿ— ರಸಾಯನಿಕ ಗೊಬ್ಬರದ ಮೇಲಿನ ತೆರಿಗೆಯನ್ನು ರಾಜ್ಯಸಭೆಯ ಎಲ್ಲ ಪಕ್ಷದ ಸದಸ್ಯರೂ ಕಟುವಾಗಿ ಟೀಕಿಸಿದರು

○

ಪುರಸಭೆ

ಮೈಸೂರು— ಪುರಸಭೆ ಉಪಾಧ್ಯಕ್ಷ ಶ್ರೀ ಕಪ್ಪಾಜಪ್ಪನವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ವಿಶೇಷಾಧಿವೇಶನದಲ್ಲಿ, ಮೈಸೂರು ನಗರದ ರೂ. ನೂರೂವರೆ ಕೋಟಿ ಅಂದಾಜಿನ ತೃತೀಯ ಹಂತದ ನೀರು ಸರಬರಾಜು ಅಭಿವೃದ್ಧಿಗಾಗಿ ರಾಜ್ಯ ಸರಕಾರವಿಂದ ಈ ವರ್ಷ ಸಾಲದ ಮೊದಲನೇ ಕಂತಾಗಿ ರೂ 25 ಲಕ್ಷ ಪಡೆಯಲು ತೀರ್ಮಾನಿಸಲಾಯಿತು.

ಎಂ ಪಿ ಗಳಿಗೂ ವಿನಾಯಿತಿ ಇಲ್ಲ

ನವದೆಹಲಿ– ವಿಮಾನ ಹತ್ತುವ ಮುಂಚೆ ರಕ್ಷಣಾ ಕಾರ್ಯಕ್ಕಾಗಿ ಪ್ರಯಾಣೀಕರನ್ನು ಚೆಕ್ ಮಾಡುವುದನ್ನು ಪಾರ್ಲಿಮೆಂಟು ಸದಸ್ಯರಿಗೆ ವಿನಾಯಿತ ಕೊಡಲಾಗುವುದಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ಸಭಾಪತಿ ಚುನಾವಣೆ

ಬೆಂಗಳೂರು— ವಿಧಾನ ಪರಿಷತ್ತಿನ ಸಭಾಪತಿಯರ ಆಯ್ಕೆ ಏಪ್ರಿಲ್ 10ರಂದು ನಡೆಯಲಿದೆ.

●

ಲೈಂಗಿಕ ಕೊರತೆ

ಕಲ್ಕತ್ತಾ– ಕಾಮುಕತ್ವ ಮತ್ತು ಲೈಂಗಿಕ ಕೊರತೆ ಬಗ್ಗೆ ಮೂಲಿಕಾ ಔಷಧೋಪಚಾರಗಳಿರುವ 1400 ವರ್ಷಗಳ ಹಿಂದಿನ ಮತ್ತು ಅಪರೂಪವಾದ ತಾಳೆಗರಿಯ ಕೈಬರಹ ಗ್ರಂಥವು ನೇಪಾಳದ ರಾಷ್ಟ್ರೀಯ ಪುರಾತನ ಕಾಗದಪತ್ರಗಳನ್ನು ಶೇಖರಿಸಿಟ್ಟಿರುವ ಸ್ಥಳದಲ್ಲಿ ಪತ್ತೆಯಾಗಿದೆ. ‘ಸ್ಮರದೀಪಿಕ ” ಎಂಬ ಈ ಗ್ರಂಥವು ನೇಪಾಳದ 2 ನೇ ಜವದೇವರಾಜನ ಆಸ್ಥಾನದಲ್ಲಿದ್ದ ಪ್ರಖ್ಯಾತ ಕವಿ ಬುದ್ಧ ಕೀರ್ತಿ ಬರೆದುದಾಗಿದೆ – ಇದರಲ್ಲಿ ಲೈಂಗಿಕ ಕೊರತೆ ನಿವಾರಣೆಗೆ 4 ಔಷಧಿಪಟ್ಟಿಗಳಿವೆ.

★

ಅಧ್ಯಕ್ಷ ಗಿರಿಯವರ ನುಡಿ

ಬ್ಯಾಂಗ್‌ಕಾಕ್ — ಉಪಖಂಡದಲ್ಲಿ ಶಾಶ್ವತ ಶಾಂತಿ ನೆಲೆಸುವವರೆಗೆ ಭಾರತವು ಗಡಿ ಪರಿಸ್ಥಿತಿ ಬಗ್ಗೆ ಎಚ್ಚರಿಕೆಯಿಂದ ಇರಬೇಕಾಗಿದೆ ಎಂದು ಥೈಲ್ಯಾಂಡ್‌ನಲ್ಲಿಯ ಭಾರತೀಯ ಜನರನ್ನು ಕುರಿತು ಭಾರತದ ಅಧ್ಯಕ್ಷ ಶ್ರೀ ಗಿರಿಯವರು ಹೇಳಿದರು – ಡಿಸೆಂಬರು ಯುದ್ಧದ ವಿಜಯವು ಇನ್ನೂ ಶಾಶ್ವತ ಶಾಂತಿಯ ಮಾರ್ಗ ಕೊಡಬೇಕಾಗಿ ಎಂದೂ ಹೇಳಿದರು.

ವಿದ್ಯಾರ್ಥಿಗಳ ದಸ್ತಗಿರಿ

ಪಾಟ್ನಾ— ತಮ್ಮ ಕುಂದುಕೊರತೆಯನ್ನು ಮಂತ್ರಿಗಳು ಮತ್ತು ಶಾಸಕರಿಗೆ ತಿಳಿಸಲು ಶಾಸನಸಭೆ ಕಾಂಪೌಂಡಿಗೆ ನುಗ್ಗಲು ಪ್ರಯತ್ನಿಸಿದ 11 ವಿದ್ಯಾರ್ಥಿಗಳನ್ನು ದಸ್ತಗಿರಿಮಾಡಲಾಯಿತು – ಒಬ್ಬ ಸ್ನಾತಕೋತ್ತರ ವಿದ್ಯಾರ್ಥಿ ಅನ್ನಸತ್ಯಾಗ್ರಹ ಕೈಗೊಂಡಿದ್ದಾನೆ.

★

ಮುಖ್ಯಮಂತ್ರಿಗಳಿಗೆ ಸನ್ಮಾನ

ಮೈಸೂರು— ಪುರಸಭೆಯು ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರಿಗೆ ಏಪ್ರಿಲ್ 6 ರಂದು ಟೌನ್‌ಹಾಲ್‌ನಲ್ಲಿ ಪೌರಸನ್ಮಾನ ನೀಡಲಿದೆ.

○

ಆಸ್ತಿ ಸಾಲದ ವಿವರ

ಬೆಂಗಳೂರು— ತಮ್ಮ ಆಸ್ತಿ ಸಾಲದ ವಿವರವನ್ನು ನಾಳೆಯೇ ಸ್ಪೀಕರ್‌ರವರಿಗೆ ಕೊಡುವುದಾಗಿ ಮುಖ್ಯಮಂತ್ರಿ ಶ್ರೀ ದೇವರಾಜ ಅರಸುರವರು ನಿನ್ನೆ ಶಾಸನಸಭೆಯಲ್ಲಿ ತಿಳಿಸಿ, ಸಭೆಯ ಎಲ್ಲಾ ಸದಸ್ಯರೂ ಹಾಗೆ ಮಾಡುವಂತೆ ಕೋರಿಕೆಯನ್ನು ವ್ಯಕ್ತಪಡಿಸಿದರು

★

ಲಾಟರಿ ಮೇಲಿನ ತೆರಿಗೆ

ಬೆಂಗಳೂರು— ರಾಜ್ಯಗಳಲ್ಲಿನ ಲಾಟರಿಗಳ ಮೇಲೆ ಕೇಂದ್ರ ತೆರಿಗೆ ವಿಧಿಸಿರುವುದಕ್ಕೆ ಮಾಜಿ ಅರ್ಥ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆ ವಿಷಾದಿಸಿರುವರು

★

ಬೆಂಕಿ ಅನಾಹುತ

ಅಲಹಾಬಾದು— ಸ್ವದೇಶೀ ಹತ್ತಿ ಗಿರಣಿಗೆ ಬೆಂಕಿ ಬಿದ್ದು ರೂ 62 ಲಕ್ಷ ಬೆಲೆಯ ಸರಂಜಾಮುಗಳು ಹಾಳಾದವು.

★

ಸರ್ಕಾರಿ ಪತ್ರಿಕಾ ಪ್ರಕಟಣೆಗಳು

ಬೆಂಗಳೂರು— ಯುಗೋಸ್ಲೋವಿಯಾದ ಫೆಡರಲ್ ಅಸೆಂಬ್ಲಿ ಅಧ್ಯಕ್ಷ ಶ್ರೀ ವಿಜಾಲ್ಕೋ ತೋಡೋರೆವಿಕ್ ರವರ ನೇತೃತ್ವದಲ್ಲಿ ಹದಿನೆಂಟು ಮಂದಿ ಸದಸ್ಯರಿಂದ ಕೂಡಿದ ಪಾರ್ಲಿಮೆಂಟರಿ ನಿಯೋಗವೊಂದು ಏಪ್ರಿಲ್ 3 ರಂದು ಬೆಂಗಳೂರಿಗೆ ಆಗಮಿಸುವುದು

★

ಮೈಸೂರು ಮೋಟಾರು ವಾಹನ ಟೈರುಗಳ ನಿಯಂತ್ರಣ ಆಜ್ಞೆ (1972) ಯಲ್ಲಿ ತಿದ್ದುಪಡಿ ಮಾಡಿರುವ ಪ್ರಯುಕ್ತ ಇನ್ನು ಮುಂದೆ 1000 x 20 ಟೈರುಗಳಿಗೆ ಪರ್ಮಿಟ್‌ಗಳನ್ನು ನೀಡಲಾಗುವುದಿಲ್ಲವೆಂದು ರಾಜ್ಯ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ ತಿಳಿಸಿದೆ.

ಇತ್ತೀಚಿನ ಭಾರತ–ಪಾಕಿಸ್ತಾನದ ಯುದ್ಧದಲ್ಲಿ ಗಾಯಗೊಂಡ ನಾಲ್ಕು ಯೋಧರ ಕುಟುಂಬಗಳಿಗೆ ರಾಜ್ಯದ ಸಹಾಯಧನವಾದ ತಲಾ ಒಂದು ಸಾವಿರ ರೂಪಾಯಿಗಳ ಚೆಕ್ಕುಗಳನ್ನು ಬೆಂಗಳೂರು ಜಿಲ್ಲಾಧಿಕಾರಿ ಶ್ರೀ ತಿಪ್ಪೇಜಿರಾವ್‌ರವರು ಯೋಧರ ಮನೆಗಳಿಗೆ ಹೋಗಿ ಅರ್ಪಿಸಿದರು.

ಸಣ್ಣ ಉಳಿತಾಯ ಸಂಗ್ರಹವನ್ನು ಹೆಚ್ಚಿಸುವ ಉದ್ದೇಶದಿಂದ ಚಿತ್ರದುರ್ಗ ಜಿಲ್ಲೆಯ ದಾವಣಗಿರೆಯಲ್ಲಿ ಇತ್ತೀಚೆಗೆ ನಡೆಸಲಾದ ಪಾದಯಾತ್ರೆಯಲ್ಲಿ ಐದು ಲಕ್ಷ ಏಳು ಸಾವಿರ ರೂ. ಸಂಗ್ರಹಿಸಲಾಯಿತು

ವುಡ್‌ಲಾಂಡ್ಸ್ 24-3-72ರಿಂದ ಅಮೋಘ 5ನೇ ವಾರ

ಧರ್ಮೇಂದ್ರ, ಜಯಬಾಧ್ಡುರಿ ಅಭಿನಯಿಸಿರುವ ಹೃಷಿಕೇಶ್ ಮುಖರ್ಜಿಯವರ
ವರ್ಣರಂಜಿತ ಹಿಂದಿ ಚಿತ್ರ

ಗುಡ್ಡಿ

ವಿಶೇಷ ಭೂಮಿಕೆಯಲ್ಲಿ ದಿಲೀಪ್ ಕುಮಾರ್, ರಾಜೇಶ್ ಖನ್ನ, ಅಶೋಕ್ ಕುಮಾರ್, ನವೀನ ನಿಶ್ಚಲ್, ವಿನೋದ್ ಖನ್ನ, ಅಮಿತಾ ಬರ್ಚ್
ಇವರು ಕಾಣಿಸಿಕೊಳ್ಳುವರು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಕ್ಕೆ ಅಂದಾಜ್ (ಹೊಸ ಪ್ರಿಂಟ್

ಅಪೆರಾ 24 3 72 ರಿಂದ

ಆಶಾಪರೇಖ್ ಮತ್ತು ನವೀನ ನಿಶ್ಚಲ್ ಪಾತ್ರವಹಿಸಿರುವ
ನವರತ್ನರವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ನಾದಾನ್

ಸಂಗೀತ : ಶಂಕರ್ ಜೈಕಿಷನ್ ದಿಗ್ದರ್ಶನ : ದೇವನ್ ವರ್ಮ
ದಿನ 3 ಪ್ರದರ್ಶನಗಳು

SHAKTI
SUDHA
A Superb Tonic

Edited Printedand Published by Dharmapracharanirata
M S Krishna Rao (Propretor) at the Satvvadi Press
Chamarajapuram Mysore 4

ಆಹ್ಲಾದಕರ

ಸುವಾಸನೆ

ಮೈಸೂರು ಗಂಧದ ಎಣ್ಣೆಯು
ತನ್ನ ಶ್ರೇಷ್ಠತೆಯಿಂದ
ಜಗದ್ವಿಖ್ಯಾತಿಯನ್ನು ಪಡೆದಿದೆ.

★

ಪರಿಶುದ್ಧವಾದ ಗಂಧದ
ಎಣ್ಣೆಯು ಮೈಸೂರು ಸರ್ಕಾರದ
ಸೀಲು ಮತ್ತು ಲೇಬಲ್‌ಗಳುಳ್ಳ
ಸೀಸೆಗಳಲ್ಲಿ ಮಾತ್ರ
ದೊರೆಯುತ್ತವೆ.

★

ಮೈಸೂರು ಸರ್ಕಾರದ ಗಂಧದ ಎಣ್ಣೆ
ಕಾರ್ಖಾನೆ.

ಮೈಸೂರು–ಮತ್ತು–ಶಿವಮೊಗ್ಗ

Contribute Liberally
to the National Defence Fund